ಮರಳುತ್ತಿದ್ದಳು. ಅವಳ ದನಿ, ಅದರಲ್ಲಿನ ಲಯ, ಅವಳ ಕಥೆಯಲ್ಲಿ ತನ್ನನ್ನೂ ಸೇರಿಸಿಕೊಂಡಿರುವುದು... ಅವನನ್ನು ಸಮ್ಮೋಹನಗೊಳಿಸಿದವು. ಎಂದೋ ಕಳೆದುಕೊಂಡ ಅಮ್ಮನ ನೆನಪು ಆವರಿಸಿಕೊಳ್ಳತೊಡಗಿತು. ಈಗ ಅವ ಅಮ್ಮನ ದನಿಯನ್ನೂ ಕೇಳಬಲ್ಲವನಾಗಿದ್ದ - ಅವನ ಕುರಿತ ಅವಳ ಕನಸುಗಳು, ಅವಳಿಗೆ ಕೊಟ್ಟ ಭರವಸೆಗಳು... ನಿಮಿಷಗಳು ಕರಗಿಹೋಗುತ್ತಿದ್ದವು, ಆಲಿಸುತ್ತಲೇ ಹೋದ.

ಅವಳೊಡನೆಯ ಮಾತುಕತೆಯಲ್ಲಿ ಮುಳುಗಿಹೋಗಿದ್ದ ಆತ್ಮಾರಾಮನಿಗೆ ತನ್ನ ಮ್ಯಾನೇಜರ್ ಎದ್ದು ನಿಂತು ತನ್ನ ಜಿರಾಫೆ ಕುತ್ತಿಗೆಯನ್ನು ಹೊರಚಾಚಿ ತನ್ನತ್ತ ಸನ್ನೆ ಮಾಡುತ್ತಿರುವುದು, ಕತ್ತಿಯಂತೆ ಅವನ ಟೈ ತೂಗುತ್ತಿದ್ದುದೂ, ದನಿ ಹೊರಡಿಸದೇ ತುಟಿಯನ್ನು ಅಲುಗಿಸುತ್ತಾ "ಏನು ಮಾಡ್ತಿದಿಯಾ?", "ಮುಗಿಸಿಬಿಡು" ಇತ್ಯಾದಿ ಸನ್ನೆಗಳನ್ನು ಆರ್ಕೆಸ್ಟ್ರಾದಲ್ಲಿನ ನಿರ್ದೇಶಕನ ಹಾಗೆ ಕೈಯಾಡಿಸಿ ಮಾಡುತ್ತಿದ್ದುದೂ ಕಾಣುತ್ತಿತ್ತು. ಆದರೆ ಅವನು ಆಲಿಸುತ್ತಿದ್ದ ದನಿಯ ಆಕರ್ಷಣೆಯ ಮುಂದೆ ಅದು ನಗಣ್ಯವಾಗಿತ್ತು.

ಅವಳು ತನ್ನ ಮಗನ ಕಥೆಯನ್ನು ಹೇಳುತ್ತಿದ್ದರೆ ಆತ್ಮಾರಾಮನಿಗೆ ತನ್ನದೇ ಬದುಕು ಬಿಚ್ಚಿಟ್ಟಂತೆ ಆಗುತ್ತಿತ್ತು. ಮಾತುಕತೆ ತೀರಾ ಖಾಸಗಿಯೆನಿಸಿ ಕೂರಲಾಗದೇ ಎದ್ದು ನಿಂತು ಕೇಳುವುದನ್ನು ಮುಂದುವರೆಸಿದ. ಆಗಲೇ ಎಲ್ಲರೂ ತನ್ನತ್ತ ನೋಡುತ್ತಿರುವುದು ಗಮನಕ್ಕೆ ಬಂತು. ಸುತ್ತಲಿನ ಎಲ್ಲ ನೋಟಗಳನ್ನು ಕಡೆಗಣಿಸಿ ಕೇಳುತ್ತಲೇ ಹೋದ.

ಇದ್ದಕ್ಕಿದ್ದಂತೆಯೇ ಮಾತು ಕೇಳುವುದು ನಿಂತು, ಎಲ್ಲವೂ ಖಾಲಿಯಾದಂತೆನಿಸಿತು. ಅಲ್ಲಿಯವರೆಗೂ ಸನ್ನೆ ಮಾಡುತ್ತಿದ್ದ ಮ್ಯಾನೇಜರ್ ಮಾತ್ರ ಕಾಣಲಿಲ್ಲ. ಕರೆಯನ್ನು ಅವನಿಂದ ಕಡಿತಗೊಳಿಸಿ ಬೇರೆಯವರಿಗೆ ವರ್ಗಾಯಿಸಲಾಗಿತ್ತು.

ಆತ್ಮಾರಾಮ ಮತ್ತೆ ತನ್ನ ಆಸನದಲ್ಲಿ ಕುಳಿತುಕೊಂಡ. ಇನ್ನೊಂದು ಕರೆಯನ್ನು ಸ್ವೀಕರಿಸಬೇಕೋ ಬೇಡವೋ ಎನ್ನುವ ಗೊಂದಲದಲ್ಲಿ ಬಿದ್ದ. ಸುತ್ತಲಿನವರು ಸ್ವಲ್ಪ ಹೊತ್ತು ಅವನ ಕಡೆಗೆ ನೋಡಿ, ತಮ್ಮ ಕೆಲಸದಲ್ಲಿ ಮಗ್ನರಾದರು. ಅವರೆಲ್ಲರ ದೃಷ್ಟಿಯಿಂದ ಅವ ಮತ್ತ ಇಲ್ಲವಾದಂತೆನಿಸಿತು.

ಸುಮ್ಮನೆ ಕುಳಿತುಕೊಂಡ. ಹೀಗೆ ಆದಾಗ ಸಾಮಾನ್ಯವಾಗಿ ತನ್ನ ಆಫೀಸಿಗೆ ಕರೆಸಿ ಬುದ್ಧಿ ಹೇಳುತ್ತಿದ್ದ ಮ್ಯಾನೇಜರ್ ಈ ಸಲ ರಜ ಹಾಕಿ ಮನೆಗೆ ಹೋಗುವಂತೆ ಇಮೇಲಿನ ಮೂಲಕವೇ ಸೂಚಿಸಿದಾಗ, ಅದಕ್ಕಿಂತಲೂ ಬೇರೆ ಒಳ್ಳೆಯ ದಾರಿ ಆತ್ಮಾರಾಮನಿಗೂ ಹೊಳೆಯದೇ ಹೊರಬಂದ. ಕನ್ನಡಿಯ ಕಗ್ಗಂಟನ್ನು ಬಿಡಿಸಿಕೊಳ್ಳಲು ಇಡೀ ದಿನ ಅವನ ಜೊತೆಗಿತ್ತು.

* * *

ಆತ್ಮಾರಾಮನ ದಿನದ ಉಳಿದ ಭಾಗ ರಾತ್ರಿ ಒಂಬತ್ತು ಗಂಟೆಗೆ ಭೇಟಿಯಾಗಲು ತನ್ನನ್ನು ಕರೆದ ಲೋಕಿ ಏನು ಹೇಳಬಹುದು ಮತ್ತು ಫೋನ್ ಮಾಡಿ ತನ್ನ ಹೆಸರನ್ನೂ ಹೇಳದೇ ಹೋದ ಆ ಮಹಿಳೆ ಯಾಕೆ ಕರೆ ಮಾಡಿರಬಹುದು ಎಂದು ಚಿಂತಿಸುವುದರಲ್ಲಿ ಕಳೆದುಹೋಯಿತು. ನಂದನವನ ಹೋಟೆಲಿನ ಆಸುಪಾಸಿನಲ್ಲಿಯೇ ಸುತ್ತುತ್ತ ಸಮಯ ಕಳೆದ. ಬಹಳಷ್ಟು ಸಲ ಹೋಟೆಲಿನ ಮುಂದೆಯೇ ಹಾದು ಹೋದರೂ ಒಳಹೊಕ್ಕುವ, ಶೆಟ್ಟರ ದೃಷ್ಟಿಗೆ ಬೀಳುವ-ಬೀಳದಿರುವ ಎರಡೂ ಸಾಧ್ಯತೆಗಳ ನಡುವಿನ ಅತಂತ್ರಕ್ಕೆ ತನ್ನನ್ನು ಒಡ್ಡಿಕೊಳ್ಳುವ ಧೈರ್ಯವಾಗಲಿಲ್ಲ. ಒಂಬತ್ತು ಗಂಟೆ ಯಾವಾಗ ಆದೀತು, ಲೋಕಿ ಯಾವಾಗ ಹೊರಬರಬಹುದು ಎನ್ನುವುದನ್ನು ಕಾಯುತ್ತ ಸುತ್ತತೊಡಗಿದ. ಲೋಕಿ ಹೊರಬಂದೊಡನೆಯೆ ಅವನನ್ನು ಹಿಂಬಾಲಿಸಿದ. ಲೋಕಿಯ ಮನೆ ಎಷ್ಟು ದೂರವಿದೆ ಎನ್ನುವುದು ತಿಳಿದಿರಲಿಲ್ಲ. ಆ ಪ್ರಶ್ನೆ ಅವನನ್ನು ಕಾಡಲೂ ಇಲ್ಲ. ಸುಮ್ಮನೆ ಹಿಂಬಾಲಿಸಿದ.

ಲೋಕಿ ಬಾಗಿಲು ತೆರೆದು ದೀಪ ಹಾಕಿದ. ನಾಲ್ಕೂ ಕಡೆ ಗೋಡೆಗಳು ಜೈಲಿನ ಗೋಡೆಗಳಂತೆ ಆವರಿಸಿಕೊಂಡಿದ್ದವು. ಆತ್ಮಾರಾಮನ ಹೊಯ್ದಾಟದ ತೀವ್ರತೆ ತನಗೆ ತಿಳಿದಿರುವ ಸಂಗತಿಯೇ ಎನ್ನುವ ದನಿಯಲ್ಲಿ, "ಒಳಗೆ ಬಾ, ಕೂತ್ಕೋ" ಎಂದು ಕುರ್ಚಿಯನ್ನು ಬಿಡಿಸಿ ಇಟ್ಟ.

ಆತ್ಮಾರಾಮ ಆ ರೂಮಿನಲ್ಲಿ ಇದ್ದ ಒಂದೇ ಕುರ್ಚಿಯಲ್ಲಿ ಕುಳಿತ. ಲೋಕಿ ನಿಂತು ಮಾತಾಡುವ ರೀತಿ ನೋಡಿದರೆ ಆಗಲೇ ರಿಹರ್ಸಲ್ ಮಾಡಿಕೊಂಡು ಬಂದಂತಿತ್ತು. ಹೋಟೆಲಿನಲ್ಲಿ ನೋಡಿದ್ದಕ್ಕಿಂತ ಭಿನ್ನವಾಗಿ, ಮೇಕಪ್ ಕಳಚಿಟ್ಟು ಪಾತ್ರದಿಂದ ಹೊರಬಂದ ಹಾಸ್ಯನಟನಂತೆ, ಅನುಭವದಿಂದ